ದಿನಾಂಕ 28-7-2018 ರಂದು ಬೆಳಿಗ್ಗೆ 11.00 ಗಂಟೆಗೆ ಕೊಠಡಿ ಸಂ. 252, ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಮುಂದೂಡಲಾದ 36ನೇ (ವಿಶೇಷ) ಸಭೆಯ ನಡುವಳಿಗಳು:

ಉಪಸ್ಥಿತರು:

1. ಶ್ರೀ ಗುತ್ತಿ ಜಂಬುನಾಥ, ಮಾನ್ಯ ಕುಲಪತಿಗಳು (ಪ್ರಭಾರ), ಕೃವಿವಿ., ರಾಯಚೂರು — ಅಧ್ಯಕ್ಷರು
2. ಶ್ರೀ ಎ.ಎ. ಚಪ್ಪರ್‌ಬಂದ್, ಸರ್ಕಾರದ ಉಪ-ಕಾರ್ಯದರ್ಶಿಗಳು, ಕೃಷಿ ಇಲಾಖೆ, (ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಪರವಾಗಿ) — ಸದಸ್ಯರು
3. ಶ್ರೀಮತಿ ಪದ್ಮಾವತಿ, ಸರ್ಕಾರದ ಉಪ-ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) — ಸದಸ್ಯರು
4. ಡಾ. ಎಂ. ಶೇಖರಗೌಡ, ಹೇರೂರು, ಗಂಗಾವತಿ, ಕೊಪ್ಪಳ ಜಿಲ್ಲೆ — ಸದಸ್ಯರು
5. ಶ್ರೀಮತಿ ಹೇಮಾವತಿ ಲಂಕೇಶ, ಗಂಗಾವತಿ ಕೊಪ್ಪಳ ಜಿಲ್ಲೆ — ಸದಸ್ಯರು
6. ಶ್ರೀ ಅಮರೇಶ ಬಲ್ಲಿದವ, ದೇವದುರ್ಗ, ರಾಯಚೂರು ಜಿಲ್ಲೆ — ಸದಸ್ಯರು
7. ಶ್ರೀ ಸಿದ್ದಪ್ಪ ಭಂಡಾರಿ, ಕಲಮಲ, ರಾಯಚೂರು ಜಿಲ್ಲೆ — ಸದಸ್ಯರು
8. ಶ್ರೀ ವೀರನಗೌಡ ಪರಸರೆಡ್ಡಿ, ನಾಲವಾರ, ಚಿತ್ತಾಪುರ, ಕಲಬುರಗಿ ಜಿಲ್ಲೆ — ಸದಸ್ಯರು
9. ಶ್ರೀ ಗುತ್ತಿ ಜಂಬುನಾಥ, ಕುಲಸಚಿವರು, ಕೃವಿವಿ., ರಾಯಚೂರು — ಸದಸ್ಯ-ಕಾರ್ಯದರ್ಶಿ

ಕೋರಂ ಇದ್ದ ಪ್ರಯುಕ್ತ, ಹಾಜರಿದ್ದ ಮಾನ್ಯ ಸದಸ್ಯರ ಸ್ವಾಗತದ ನಂತರ, ಸಭೆಯಲ್ಲಿ ಈ ಕೆಳಗಿನಂತೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

ದಿನಾಂಕ 7-7-2018 ರಂದು ನಡೆದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 35ನೇ ಸಭೆಯಲ್ಲಿ ವಿಷಯ ಸಂಖ್ಯೆ 2 ಮತ್ತು ದಿನಾಂಕ 13-11-2017 ರಂದು ನಡೆದ ಸಭೆಯ ವಿಷಯ ಸಂಖ್ಯೆ 4 (2) ರಡಿಯಲ್ಲಿಯ ಠರಾವುಗಳ ಅನುಸಾರ, ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಯ ಸಂಬಂಧ ಸಾಮಾನ್ಯ (ಗ್ರಾಮೀಣ) ಪ್ರವರ್ಗದಡಿ ಆಯ್ಕೆ ಸಮಿತಿಯು ನೇಮಕಾತಿಗಾಗಿ ಶಿಫಾರಿಸಿಸಲಾದ ಮೂವರು ಅಭ್ಯರ್ಥಿಗಳಾದ ಮೊದಲನೇ ಸ್ಥಾನದಲ್ಲಿರಿಸಿದ ಶ್ರೀ ಬಸವರಾಜ್, ಎರಡನೇ ಸ್ಥಾನದಲ್ಲಿರಿಸಿದ ಶ್ರೀ ಗುರುಪ್ರಸಾದ್ ಮತ್ತು ಮೂರನೇ ಸ್ಥಾನದಲ್ಲಿರಿಸಿದ ಶ್ರೀಮತಿ ಜಮುನ ಇವರ ದಾಖಲಾತಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿದ ನಂತರ, ಮಂಡಳಿಯು ಈ ಕೆಳಗಿನಂತೆ ತೀರ್ಮಾನಿಸಿತು :

1. ಶ್ರೀ ಬಸವರಾಜ್ ಇವರು 24-10-2016 ರಿಂದ ಸಹಾಯಕ ಸಸ್ಯ ಸಂರಕ್ಷಣಾಧಿಕಾರಿ (2ನೇ ದರ್ಜೆಯ ಹುದ್ದೆ) ಯಾಗಿ ನೇಮಕಗೊಂಡಿರುವುದಾಗಿ ಫರಿದಾಬಾದ್‌ನಲ್ಲಿರುವ ಸಸ್ಯ ಸಂರಕ್ಷಣಾ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿಯು ದಿನಾಂಕ 16-8-2017 ರಂದು ಪ್ರಮಾಣ ಪತ್ರ ನೀಡಿದಾಗ್ಯೂ, ಶ್ರೀ ಬಸವರಾಜ್ ಇವರು ದಿನಾಂಕ 8-9-2017 ರಂದು ಸಲ್ಲಿಸಿದ ಮೇಲುಸ್ತರಕ್ಕೆ ಸೇರಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರದಲ್ಲಿ ಇವರು 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಕಾರಣ, ಶ್ರೀ ಬಸವರಾಜ್ ಇವರು ಸಲ್ಲಿಸಿದ ಮೇಲುಸ್ತರಕ್ಕೆ ಸೇರಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರವನ್ನು ಅಂಗೀಕರಿಸದಿರಲು ಮತ್ತು ಸದರಿಯವರ ನೇಮಕಾತಿಗಾಗಿ ಮಾಡಿದ ಆಯ್ಕೆ ಸಮಿತಿಯ ಶಿಫಾರಸ್ಸನ್ನು ಮಂಡಳಿಯು ತಿರಸ್ಕರಿಸಲು ಠರಾಯಿಸಿತು.

2. ಶ್ರೀ ಗುರುಪ್ರಸಾದ್ ಇವರು ದಿನಾಂಕ 29-4-2008 ರಿಂದ ಸಹಕಾರ ಸಂಘಗಳ ನಿರೀಕ್ಷಕರಾಗಿ (ರೂ. 18,340/- ಮಾಸಿಕ ವೇತನವುಳ್ಳ 2ನೇ ದರ್ಜೆಯ ಹುದ್ದೆ) ಕಾರ್ಯನಿರ್ವಹಿಸುತ್ತಿರುವ ಬಗ್ಗೆ 21-1-2013 ರಂದು ಬೆಂಗಳೂರಿನ ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಸಹಾಯಕ ನಿಬಂಧಕರು (ಸಿಬ್ಬಂದಿ ಮತ್ತು ಆಡಳಿತ) ಪ್ರಮಾಣ ಪತ್ರ ನೀಡಿದ್ದಾಗ್ಯೂ, ದಿನಾಂಕ 20-10-2011 ರಂದು ಸಲ್ಲಿಸಲಾದ ಇವರ ಆದಾಯ ಮತ್ತು ಜಾತಿ ಪ್ರಮಾಣ ಪತ್ರದಲ್ಲಿ ಶ್ರೀ ಗುರುಪ್ರಸಾದ್ ರವರು 2ನೇ ದರ್ಜೆ ಅಧಿಕಾರಿಯಾಗಿಲ್ಲವೆಂತಲೂ ಮತ್ತು ಇವರ

ಕುಟುಂಬದ ವಾರ್ಷಿಕ ಆದಾಯ ರೂ. 20,000/– (ರೂಪಾಯಿ ಇಪ್ಪತ್ತು ಸಾವಿರಗಳು ಮಾತ್ರ) ಇದೆ ಎಂದು ಪ್ರಮಾಣೀಕರಿಸಲಾಗಿದೆ. ಕಾರಣ, ಶ್ರೀ ಗುರುಪ್ರಸಾದ್ ಇವರು ಸಲ್ಲಿಸಿದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಅಂಗೀಕರಿಸದಿರಲು ಮತ್ತು ಸದರಿಯವರ ನೇಮಕಾತಿಗಾಗಿ ಮಾಡಿದ ಆಯ್ಕೆ ಸಮಿತಿಯ ಶಿಫಾರಸ್ಸನ್ನು ಮಂಡಳಿಯು ತಿರಸ್ಕರಿಸಲು ಠರಾಯಿಸಿತು.

3. ಶ್ರೀಮತಿ ಜಮುನಾ ಇವರ ಮೂಲ ಅರ್ಜಿಯನ್ನು ಪರಿಶೀಲಿಸಿದ, ಪರಿಶೀಲನಾ ಸಮಿತಿಯು ಇವರನ್ನು ಸಾಮಾನ್ಯ (ಗ್ರಾಮೀಣ) ಪ್ರವರ್ಗದಡಿ ಪರಿಗಣಿಸದಿರುವುದನ್ನು ಗಮನಿಸಿದ ಮಂಡಳಿಯು ಆಯ್ಕೆ ಸಮಿತಿಯು ಸದರಿ ಪ್ರವರ್ಗದಡಿ ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಗೆ ನೇಮಕಾತಿ ಮಾಡಲು ನಡೆಸಿದ ಸಂದರ್ಶನದ ವೇಳೆಯಲ್ಲಿ ಶ್ರೀಮತಿ ಜಮುನಾ ಇವರಿಂದ ಗ್ರಾಮೀಣ ಪ್ರವರ್ಗದ ಪ್ರಮಾಣ ಪತ್ರವನ್ನು ಪಡೆದು, ಇವರನ್ನು ಮೂರನೇ ಸ್ಥಾನದಲ್ಲಿರಿಸಿ, ಶಿಫಾರಿಸಿರಬಹುದೆಂದು ಅಭಿಪ್ರಾಯಿಸಿ, ಶ್ರೀಮತಿ ಜಮುನಾ ಇವರ ಅರ್ಹತೆಯ ಬಗ್ಗೆ ಖಾತ್ರಿಪಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ಮಾನ್ಯ ಸದಸ್ಯರಾದ ಡಾ॥ ಎಂ. ಶೇಖರಗೌಡ್, ಶ್ರೀ ಸಿದ್ದಪ್ಪ ಭಂಡಾರಿ, ಆರ್ಥಿಕ ಮತ್ತು ಕೃಷಿ ಇಲಾಖೆಗಳ ಉಪ–ಕಾರ್ಯದರ್ಶಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಅಮರೇಶ್ ಬಲ್ಲಿದವ ಇವರು ಶ್ರೀಮತಿ ಜಮುನಾ ಇವರು ಸಲ್ಲಿಸಿರುವ ದಾಖಲಾತಿಗಳ ಆಧಾರದ ಮೇಲೆ ಸದರಿಯವರಿಗೆ ನೇಮಕಾತಿ ಆದೇಶ ನೀಡದಿದ್ದಲ್ಲಿ, ಅರ್ಹ ಅಭ್ಯರ್ಥಿಯು ನೇಮಕಾತಿಯಿಂದ ವಂಚಿತಗೊಳ್ಳುವುದಲ್ಲದೇ, ಸಾಮಾಜಿಕ ನ್ಯಾಯ ತತ್ವಗಳ ಉಲ್ಲಂಘನೆಯಾಗುವುದೆಂದು ಅಭಿಪ್ರಾಯಿಸುತ್ತಾ, ಶ್ರೀಮತಿ ಜಮುನಾರವರಿಗೆ ನೇಮಕಾತಿ ಆದೇಶ ನೀಡುವುದಕ್ಕೆ ಯಾವುದೇ ರೀತಿಯ ಅಡ್ಡಿ ಇಲ್ಲವೆಂದು ಸಭೆಯ ಗಮನಕ್ಕೆ ತಂದರು.

ಸಭಾಧ್ಯಕ್ಷರು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ಕಲಂ 12 (7) ರಲ್ಲಿ **"ಮಂಡಳಿಯು ತನ್ನ ಸಭೆಯಲ್ಲಿ ಪರಿಶೀಲಿಸುತ್ತಿರುವ ಯಾವುದೇ ವಿಷಯಗಳ ಬಗ್ಗೆ ತಜ್ಞ ಸಲಹೆ ಪಡೆಯಲು, ಆ ವಿಷಯಗಳಲ್ಲಿ ಪರಿಣಿತಿ ಅಥವಾ ವಿಶೇಷ ಜ್ಞಾನವನ್ನು ಉಳ್ಳ ಯಾವೊಬ್ಬ ವ್ಯಕ್ತಿಯನ್ನು ತನ್ನ ಸಭೆಗೆ ಹಾಜರಾಗಲು ಆಹ್ವಾನಿಸಬಹುದು. ಅಂತಹ ವ್ಯಕ್ತಿಯು ಅಂತಹ ಸಭೆಯ ವ್ಯವಹರಣೆಗಳಲ್ಲಿ ಮಾತನಾಡಬಹುದು ಅಥವಾ ಅನ್ಯಥಾ ಭಾಗವಹಿಸಬಹುದು. ಆದರೆ, ಆತನು ಮತದಾನದ ಹಕ್ಕನ್ನು ಹೊಂದಿರುವುದಿಲ್ಲ........."** ಎಂದು ಉಪಬಂಧಿಸಲಾಗಿದ್ದನ್ನು ಸಭೆಯ ಗಮನಕ್ಕೆ ತಂದು, ಸದರಿ ಉಪಬಂಧಗಳನ್ವಯ, ಮಂಡಳಿಯು ಈ ವಿಷಯದ ಕುರಿತು ಅಗತ್ಯ ಮಾಹಿತಿವುಳ್ಳ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳು ಹಾಗೂ ಆಯ್ಕೆ ಸಮಿತಿಯ ಅಧ್ಯಕ್ಷರು ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಗೆ ಆಹ್ವಾನಿಸಿ, ಖಚಿತತೆ ಹೊಂದಬಹುದೆಂದು ತಿಳಿಸಿದರು.

ಮಾನ್ಯ ಮಂಡಳಿಯು ಈ ವಿಷಯದ ಬಗ್ಗೆ ಖಚಿತತೆ ಹೊಂದಲು, ವೈಯಕ್ತಿಕ ಮಾಹಿತಿವುಳ್ಳ, ರಾಯಚೂರು ಕೃಷಿ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳು ಹಾಗೂ ಆಯ್ಕೆ ಸಮಿತಿಯ ಅಧ್ಯಕ್ಷರಾದ ಡಾ॥ ಪಿ.ಎಂ. ಸಾಲಿಮಠ್ ರವರನ್ನು ಮುಂದಿನ ಸಭೆಗೆ ಆಹ್ವಾನಿಸಿ, ಅವರ ಹೇಳಿಕೆ ಪಡೆದ ನಂತರ, ಈ ವಿಷಯದ ಬಗ್ಗೆ ಯುಕ್ತ ನಿರ್ಧಾರ ಕೈಗೊಳ್ಳಲು ಸರ್ವಾನುಮತದಿಂದ ಠರಾಯಿಸಿತು.

**(ಕ್ರಮ : ಕುಲಸಚಿವರು)**

ದಿನಾಂಕ 7–7–2018 ರಂದು ನಡೆದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 35ನೇ ಸಭೆಯಲ್ಲಿ ವಿಷಯ ಸಂಖ್ಯೆ 2 ಮತ್ತು ದಿನಾಂಕ 13–11–2017 ರಂದು ನಡೆದ ಸಭೆಯ ವಿಷಯ ಸಂಖ್ಯೆ 4 (10) ರಡಿಯಲ್ಲಿಯ ಠರಾವುಗಳ ಅನುಸಾರ, ಸಹಾಯಕ ಪ್ರಾಧ್ಯಾಪಕರು (ಪಶು ವಿಜ್ಞಾನ / ಸಂಗೋಪನೆ / ಕುಕ್ಕುಟ ವಿಜ್ಞಾನ) ಹುದ್ದೆಯ ಸಾಮಾನ್ಯ (ಮಹಿಳಾ) ಪ್ರವರ್ಗದಡಿ ಆಯ್ಕೆ ಸಮಿತಿಯ ಶಿಫಾರಸಿನಂತೆ ನೇಮಕಾತಿ ಆದೇಶ ಪಡೆದ ಇಬ್ಬರು ಮಹಿಳಾ ಅಭ್ಯರ್ಥಿಗಳು (ಡಾ॥ ಅನ್ನಪೂರ್ಣ ಅವಟೆ ಹಾಗೂ ಡಾ॥ ಅಕ್ಷತಾ ಅಂಗಡಿ) ಕರ್ತವ್ಯಕ್ಕೆ ಹಾಜರಾಗದ ನಿಮಿತ್ತ, ಆಯ್ಕೆ ಸಮಿತಿಯು ಮೂರನೇ ಸ್ಥಾನದಲ್ಲಿರಿಸಿದ ಪುರುಷ ಅಭ್ಯರ್ಥಿಯಾದ

ಡಾ॥ ಪ್ರಕಾಶ್ ಇವರಿಗೆ ನೇಮಕಾತಿ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ / 97 / ಸೆನೆನಿ 2002 ದಿನಾಂಕ 22–11–2002 ರಲ್ಲಿಯ ಪ್ಯಾರಾ ಸಂಖ್ಯೆ 7 ರಲ್ಲಿ "ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು" ಎಂದು ಉಪಬಂಧಿಸಿರುವುದನ್ನು ಸಭೆಯ ಗಮನಕ್ಕೆ ತರಲಾಗಿ, ಮಾನ್ಯ ಮಂಡಳಿಯು, ಸರ್ವಾನುಮತದಿಂದ, ಸಹಾಯಕ ಪ್ರಾಧ್ಯಾಪಕರು (ಪಶು ವಿಜ್ಞಾನ / ಸಂಗೋಪನೆ / ಕುಕ್ಕುಟ ವಿಜ್ಞಾನ) ಹುದ್ದೆಯ ಸಾಮಾನ್ಯ (ಮಹಿಳಾ) ಪ್ರವರ್ಗದಡಿ ನೇಮಕಗೊಂಡ ಇಬ್ಬರು ಮಹಿಳಾ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದ ಕಾರಣ, 22–11–2002 ರ ಸರ್ಕಾರಿ ಆದೇಶದ ಹಿನ್ನೆಲೆಯಲ್ಲಿ, ಆಯ್ಕೆ ಸಮಿತಿಯ ಶಿಫಾರಸ್ಸಿನಂತೆ ಮೂರನೇ ಸ್ಥಾನದಲ್ಲಿರಿಸಿದ ಅರ್ಹ ಪುರುಷ ಅಭ್ಯರ್ಥಿಯಾದ ಡಾ॥ ಪ್ರಕಾಶ್ ಇವರಿಗೆ ಸದರಿ ಹುದ್ದೆಯ ನೇಮಕಾತಿ ಆದೇಶವನ್ನು ನೀಡಲು ಠರಾಯಿಸಿತು.

(ಕ್ರಮ : ಕುಲಸಚಿವರು)

ತದನಂತರ, ಈ ಕೆಳಗಿನಂತೆ ರಾಯಚೂರು ಕೃವಿವಿ., ವ್ಯವಸ್ಥಾಪನಾ ಮಂಡಳಿಯು ತನ್ನ 36ನೇ (ವಿಶೇಷ) ಸಭೆಯ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಿತು :

| | |
|---|---|
| ಐಟಂ–1 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಎಂಟನೆಯ ಘಟಿಕೋತ್ಸವಕ್ಕೆ ಅತಿಥಿಗಳ ಯಾದಿಯನ್ನು ಅಂತಿಮಗೊಳಿಸುವ ಕುರಿತು.**<br>**ಠರಾವು :**<br>ಮಾನ್ಯ ಸದಸ್ಯರಾದ ಡಾ॥ ಎಂ. ಶೇಖರಗೌಡ ರವರು ಮಂಡಿಸಿದ ಯಾದಿಯಲ್ಲಿನ ತಜ್ಞರೊಂದಿಗೆ ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಮಂತ್ರಾಲಯದ ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಡಾ॥ ಅಶೋಕ್ ದಳವಾಯಿ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾನಿರ್ದೇಶಕರಾದ ಡಾ॥ ತ್ರಿಲೋಚನ್ ಮಹಾಪಾತ್ರ ಇವರನ್ನು ಆಹ್ವಾನಿಸಲು ಸಲಹೆ ಇತ್ತರು.<br><br>ಸಭಾಧ್ಯಕ್ಷರು, ಈ ಇಬ್ಬರು ಗಣ್ಯರನ್ನು ವೈಯಕ್ತಿಕವಾಗಿ ಸಂಪರ್ಕಿಸಿ, ಅವರ ಅನುಮತಿ ಪಡೆದು, ಅವರ ಹೆಸರುಗಳನ್ನು ಯಾದಿಯಲ್ಲಿ ಮಂಡಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.<br><br>ಸಭೆಯು ಸರ್ವಾನುಮತದಿಂದ ಡಾ॥ ಅಶೋಕ್ ದಳವಾಯಿ ಹಾಗೂ ಡಾ॥ ತ್ರಿಲೋಚನ್ ಮಹಾಪಾತ್ರ ಇವರ ಅನುಮತಿ ಪಡೆದು, ಇವರ ಹೆಸರುಗಳನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಎಂಟನೇ ಘಟಿಕೋತ್ಸವದ ಸಂದರ್ಭದಲ್ಲಿ ಇತರೆ ಗಣ್ಯರೊಂದಿಗೆ ಅತಿಥಿಯಾಗಿ ಯಾದಿಯಲ್ಲಿ ಸೇರಿಸಿ, ಸದರಿ ಯಾದಿಯನ್ನು ಗಣ್ಯರ ವ್ಯಕ್ತಿ ಪರಿಚಯದೊಂದಿಗೆ ಗೌರವಾನ್ವಿತ ಕುಲಾಧಿಪತಿಗಳಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಠರಾಯಿಸಿತು.<br><br>(ಕ್ರಮ : ಕುಲಸಚಿವರು) |
| ಐಟಂ–2 | **ಮಾನ್ಯ ವ್ಯವಸ್ಥಾಪನಾ ಮಂಡಳಿಯ ನಾಮನಿರ್ದೇಶಿತ ಸದಸ್ಯರುಗಳು ಉತ್ತರ ಭಾರತದಲ್ಲಿ ಕೃಷಿ ಅಧ್ಯಯನ ಪ್ರವಾಸ ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.**<br>**ಠರಾವು :**<br>ಚರ್ಚೆಯ ನಂತರ, ಮಾನ್ಯ ಮಂಡಳಿಯು ನಾಮನಿರ್ದೇಶಿತ ಸದಸ್ಯರುಗಳು ಉತ್ತರ ಭಾರತದಲ್ಲಿ ಕೃಷಿ ಅಧ್ಯಯನ ಪ್ರವಾಸದ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಮತ್ತು ಸರ್ಕಾರದಿಂದ ಈ ಕುರಿತು ನಿರ್ಧಾರ ಸ್ವೀಕೃತವಾದ ನಂತರ, ಮುಂದಿನ ಕ್ರಮ ಜರುಗಿಸುವಂತೆ ತೀರ್ಮಾನಿಸಿತು.<br><br>ಹಾಜರಿದ್ದ ಕೃಷಿ ಇಲಾಖೆಯ ಉಪ–ಕಾರ್ಯದರ್ಶಿಗಳು ಸದರಿ ಪ್ರಸ್ತಾವನೆಯ ಕುರಿತು ಇಲಾಖೆಯು ದಿನಾಂಕ 10–8–2018 ರೊಳಗಾಗಿ ತನ್ನ ಸೂಕ್ತ ನಿರ್ಧಾರವನ್ನು ವಿಶ್ವವಿದ್ಯಾಲಯಕ್ಕೆ ತಿಳಿಸುವುದಾಗಿ ಭರವಸೆ ಇತ್ತರು.<br><br>(ಕ್ರಮ : ಕುಲಸಚಿವರು) |

| | |
|---|---|
| ಐಟಂ–3 | **ಕೃಷಿ ಸಂಶೋಧನಾ ಕೇಂದ್ರ, ಬೀದರನಲ್ಲಿ ನಿರ್ಮಾಣಗೊಂಡಿರುವ ಡಿಪ್ಲೋಮಾ ಕಾಲೇಜು ಕಟ್ಟಡದ ನೆಲಮಹಡಿ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡುವ ಕುರಿತು.**<br>**ಠರಾವು :**<br>ಕೃಷಿ ಸಂಶೋಧನಾ ಕೇಂದ್ರ, ಬೀದರನಲ್ಲಿ ನಿರ್ಮಾಣಗೊಂಡಿರುವ ಡಿಪ್ಲೋಮಾ ಕಾಲೇಜು ಕಟ್ಟಡದ ನೆಲಮಹಡಿ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ರೂ. 324.60 ಲಕ್ಷಗಳಿಗೆ ಅನುಮೋದನೆ ನೀಡಿದ ಮಂಡಳಿಯು ಇನ್ನುಮುಂದೆ ಯಾವುದೇ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ಮೂಲ ಅಂದಾಜು ಮೊತ್ತಕ್ಕಿಂತ ಶೇಕಡ 10 ರಷ್ಟು ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ ಮಾತ್ರ, ಅಂತಹ ಪ್ರಸ್ತಾವನೆಯಗಳನ್ನು ಮಂಡಳಿಯ ಅನುಮೋದನೆಗೆ ಸಲ್ಲಿಸುವಂತೆ ಮತ್ತು ಪರಿಷ್ಕೃತ ಅಂದಾಜು ಮೊತ್ತ ಮೂಲ ಅಂದಾಜು ಮೊತ್ತಕ್ಕಿಂತ ಶೇಕಡ 10 ಕ್ಕಿಂತ ಹೆಚ್ಚು ಇದ್ದಲ್ಲಿ, ಅಂತಹ ಪ್ರಸ್ತಾವನೆಗಳನ್ನು ಮಂಡಳಿಯ ಅನುಮೋದನೆಗೆ ಮಂಡಿಸಬಾರದೆಂದು ಠರಾಯಿಸಿತು.<br>**(ಕ್ರಮ : ಕುಲಸಚಿವರು / ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–4 | **"ಕನೆಕ್ಟೆಡ್ ಫಾರ್ಮಿಂಗ್ – ಇಂಡಿಯನ್ ಅಗ್ರಿಟೆಕ್ ಸ್ಪೇಸ್" ಕಾರ್ಯಕ್ರಮದ ಆಯೋಜನೆಗಾಗಿ ಪ್ರಾಯೋಜಕತ್ವ ಮೊತ್ತ ಪಾವತಿಗೆ ಅನುಮೋದನೆ ನೀಡುವ ಕುರಿತು.**<br>**ಠರಾವು :**<br>ದಿನಾಂಕ 5 ಮತ್ತು 6 ಸೆಪ್ಟಂಬರ್, 2018 ರಂದು ಬೆಂಗಳೂರಿನ ನಿಮ್ಹಾನ್ಸ್ ಸಭಾಂಗಣದಲ್ಲಿ ಭಾರತೀಯ ತಂತ್ರಜ್ಞಾನ ಸಂಸ್ಥೆ ವತಿಯಿಂದ ಹಮ್ಮಿಕೊಳ್ಳಲಾಗುತ್ತಿರುವ **"ಕನೆಕ್ಟೆಡ್ ಫಾರ್ಮಿಂಗ್ – ಇಂಡಿಯನ್ ಅಗ್ರಿಟೆಕ್ ಸ್ಪೇಸ್"** ಕಾರ್ಯಕ್ರಮದ ಆಯೋಜನೆಗಾಗಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ವತಿಯಿಂದ ರೂ. 2.00 ಲಕ್ಷ (ರೂಪಾಯಿ ಎರಡು ಲಕ್ಷಗಳು ಮಾತ್ರ) ಪ್ರಾಯೋಜಕತ್ವ ಮೊತ್ತವನ್ನು ಪಾವತಿಸಲು ಮತ್ತು ಸದರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ವಿಜ್ಞಾನಿಗಳ ಸೂಕ್ತ ಪ್ರಾತಿನಿಧ್ಯಕ್ಕೆ ಹಾಗೂ ಅವರ ಸಾಧನೆಗಳ ಪ್ರಚಾರಕ್ಕೆ ಕ್ರಮವಿಡಲು ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿ)** |
| ಐಟಂ–5 | **ರಾಯಚೂರು ಕೃಷಿ ವಿಶ್ವವಿದ್ಯಾಲಯದ ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿ, ಶ್ರೀ ಮಲ್ಲಿಕಾರ್ಜುನ ಎನ್. ಬಿರಾದಾರ ಇವರ ನಿಯೋಜನೆಯನ್ನು ಮುಂದುವರೆಸುವ ಕುರಿತು.**<br>**ಠರಾವು :**<br>ಸೂಕ್ತ ಚರ್ಚೆಯ ನಂತರ, ಮಂಡಳಿಯು ಶ್ರೀ ಮಲ್ಲಿಕಾರ್ಜುನ ಎನ್. ಬಿರಾದಾರ ಇವರ ನಿಯೋಜನೆಯನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿಯಾಗಿ 31–3–2019 ರವರೆಗೆ ಅಥವಾ ರಾಜ್ಯ ಲೆಕ್ಕಪತ್ರ ವಿಭಾಗದ ವತಿಯಿಂದ ಅರ್ಹ ಅಧಿಕಾರಿಯ ನಿಯುಕ್ತಿಯವರೆಗೆ, ಯಾವುದು ಮೊದಲು ಅಲ್ಲಿಯವರೆಗೆ, ಮುಂದುವರೆಸಲು ಹಾಗೂ ಈ ಬಗ್ಗೆ ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಅನುಕೂಲಕರ ಕ್ರಮಕ್ಕಾಗಿ ವಿನಂತಿಸಲು ಸರ್ವಾನುಮತದಿಂದ ಠರಾಯಿಸಿತು.<br>**(ಕ್ರಮ : ಕುಲಸಚಿವರು)** |
| ಐಟಂ–6 | **ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯಲ್ಲಿಯ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಕಚೇರಿಯನ್ನು ಸಿಬ್ಬಂದಿ ಸಮೇತ ಯಾದಗಿರಿಗೆ ವರ್ಗಾಯಿಸುವ ಕುರಿತು.**<br>**ಠರಾವು :**<br>ವಿಷಯದ ಬಗ್ಗೆ ದೀರ್ಘ ಚರ್ಚೆಯ ನಂತರ, ಮಂಡಳಿಯು ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯಲ್ಲಿಯ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಕಚೇರಿಯನ್ನು ಸಿಬ್ಬಂದಿ ಸಮೇತ ವರ್ಗಾಯಿಸುವ ಬಗ್ಗೆ ಕುಲಪತಿಗಳ ಅಧ್ಯಕ್ಷತೆಯಲ್ಲಿ ಹಾಗೂ ನಾಮನಿರ್ದೇಶಿತ ಸದಸ್ಯರನ್ನೊಳಗೊಂಡಂತೆ, ವಿಸ್ತರಣಾ ನಿರ್ದೇಶಕರು ಸದಸ್ಯ–ಕಾರ್ಯದರ್ಶಿಯಾಗಿರುವ ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ರಚನೆಗೊಂಡ ದಿನಾಂಕದಿಂದ ಒಂದು ತಿಂಗಳೊಳಗಾಗಿ ತನ್ನ ವರದಿಯನ್ನು ಮಂಡಳಿಗೆ ಸಲ್ಲಿಸುವಂತೆ ಠರಾಯಿಸಿತು.<br>**(ಕ್ರಮ : ಕುಲಸಚಿವರು / ವಿಸ್ತರಣಾ ನಿರ್ದೇಶಕರು)** |

| | ಹೆಚ್ಚುವರಿ ಕಾರ್ಯಸೂಚಿ ವಿಷಯಗಳು. |
|---|---|
| 1 | ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.<br>ಠರಾವು :<br>ಪ್ರಸ್ತಾವನೆಯಲ್ಲಿ ವಿವರಿಸಿದ ಈ ಕೆಳಕಂಡ ಹತ್ತು ಲಕ್ಷಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳಿಗೆ ಮಂಡಳಿಯು ತನ್ನ ಅನುಮೋದನೆ ನೀಡಿತು : |

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ.) ಲಕ್ಷಗಳಲ್ಲಿ | ಅನುದಾನ ವಿವರ |
|---|---|---|---|
| | ಮುಖ್ಯ ಆವರಣ, ರಾಯಚೂರು. | | |
| 01 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮುಖ್ಯ ಆವರಣದಲ್ಲಿ SAMETI ಕಟ್ಟಡ ನಿರ್ಮಿಸುವ ಕೆಲಸ. | 220.00 | ರೂ. 200.00 ಲಕ್ಷ ಆರ್.ಕೆ.ವಿ.ವಾಯ್, ಭಾರತ ಸರ್ಕಾರ ಮತ್ತು ರೂ. 20.00 ಲಕ್ಷ ಕೃವಿವಿ ಅನುದಾನ |
| 02 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹೊಸ ಏರಿಯಾದಲ್ಲಿ ನಿರ್ಮಿಸಿದ ಕೃಷಿ ಹೊಂಡದ ಆಳ ಮಾಡುವ ಕೆಲಸ. | 25.67 | ಕೃ. ವಿ. ವಿ. ಅನುದಾನ |
| | ಕೃಷಿ ವಿಜ್ಞಾನ ಕೇಂದ್ರ, ಕವಡಿಮಟ್ಟಿ. | | |
| 03 | ಕೃಷಿ ವಿಜ್ಞಾನ ಕೇಂದದ್ರ ಆಡಳಿತ ಕಛೇರಿ ಕಟ್ಟಡ ನಿರ್ಮಿಸುವ ಕೆಲಸ. | 159.00 | ಐ.ಸಿ.ಎ.ಆರ್. ಕೆ.ವಿ.ಕೆ. ಅನುದಾನ |
| 04 | ಕೃಷಿ ವಿಜ್ಞಾನ ಕೇಂದ್ರ ಕವಡಿಮಟ್ಟಿಯಲ್ಲಿ ರೈತರ ತರಬೇತಿಯ ವಸತಿ ನಿಲಯ ನಿರ್ಮಿಸುವ ಕೆಲಸ. | 170.00 | ರೂ. 95.50 ಲಕ್ಷ ಐ.ಸಿ.ಎ.ಆರ್.-ಕೆ.ವಿ.ಕೆ. ಮತ್ತು ರೂ. 74.50 ಲಕ್ಷ ಕೃ.ವಿ.ವಿ.ಅನುದಾನ |
| | ಕೃಷಿ ಸಂಶೋಧನಾ ಕೇಂದ್ರ, ದಢೇಸೂಗೂರ. | | |
| 05 | ಕೃಷಿ ಸಂಶೋಧನಾ ಕೇಂದ್ರ ದಢೇಸಗೂರಿನಲ್ಲಿ ಬೀಜ ಉಗ್ರಾಣದ ಹತ್ತಿರ, ಬೀಜ ಉಗ್ರಾಣ ನಿರ್ಮಿಸುವ ಕೆಲಸ. | 49.00 | ಭಾರತ ಸರ್ಕಾರ |
| 06 | ಕೃಷಿ ಸಂಶೋಧನಾ ಕೇಂದ್ರ ದಢೇಸಗೂರಿನಲ್ಲಿ ಬೀಜ ಸಂಸ್ಕರಣಾ ಘಟಕದ ಕಟ್ಟಡ ಮತ್ತು ಒಣಗಿಸುವ ಕಣದ ಕೆಲಸ. | 32.70 | ಭಾರತ ಸರ್ಕಾರ |
| | ಕೃಷಿ ಸಂಶೋಧನಾ ಕೇಂದ್ರ ಹಗರಿ. | | |
| 07 | ಕೃಷಿ ಸಂಶೋಧನಾ ಕೇಂದ್ರ ಹಗರಿಯಲ್ಲಿ ಡಿಪ್ಲೋಮಾ ಕಾಲೇಜಿಗೆ ಹೋಗಲು ರಸ್ತೆ (WBM) ನಿರ್ಮಿಸುವ ಕೆಲಸ. | 35.20 | ಕೃ. ವಿ. ವಿ. ಅನುದಾನ |

ಮುಂದುವರೆದು, ಮಂಡಳಿಯು ಚಿತ್ತಾಪುರದಲ್ಲಿ ಕೃಷಿ ಸಂಶೋಧನಾ ಕೇಂದ್ರಕ್ಕೆ ಸೂಕ್ತ ಕಟ್ಟಡ ನಿರ್ಮಾಣದ ಅವಶ್ಯಕತೆಯ ಕುರಿತು ಸಂಶೋಧನಾ ನಿರ್ದೇಶಕರು ಹಾಗೂ ಕಾರ್ಯನಿರ್ವಾಹಕ ಅಭಿಯಂತರರು ಪ್ರಸ್ತಾವನೆಯನ್ನು ದಿನಾಂಕ 31–8–2018 ರೊಳಗಾಗಿ ಮಂಡಳಿಯ ಅವಗಾಹನೆಗೆ ಸಲ್ಲಿಸುವಂತೆ ಸೂಚಿಸಿ, ಠರಾಯಿಸಿತು.

**(ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು / ಕಾರ್ಯನಿರ್ವಾಹಕ ಅಭಿಯಂತರರು)**

| | |
|---|---|
| 2 | **ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಬೂಟ್ ಮಾಡೆಲ್ ಅಡಿ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಅನುಮೋದನೆ ನೀಡುವ ಕುರಿತು.**<br>ಠರಾವು :<br>ಆರ್ಥಿಕ ಮತ್ತು ಕೃಷಿ ಇಲಾಖೆಗಳ ಉಪ–ಕಾರ್ಯದರ್ಶಿಗಳು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಮುಂದೆ ಇದೇ ರೀತಿಯ ಪ್ರಸ್ತಾವನೆ ಕುರಿತು ನಡೆದ ಚರ್ಚೆಯಲ್ಲಿ ಕೇಂದ್ರ ಸರ್ಕಾರಿ |

| | |
|---|---|
| | ಸ್ವಾಮ್ಯದ ಸೋಲಾರ್ ಎನರ್ಜಿ ಕಾರ್ಪೋರೇಶನ್ ಆಫ್ ಇಂಡಿಯಾ ದಿಂದ ಅನುಮೋದಿತಗೊಂಡ ಸಂಸ್ಥೆಯಾದ ಮೇ॥ ಕ್ಲೀನ್‌ಮ್ಯಾಕ್ಸ್ ಎನ್ವಿರೋ ಸೋಲಾರ್ ಎನರ್ಜಿ ಸೊಲ್ಯೂಷನ್ಸ್ ಪ್ರೈ.ಲಿಮಿಟೆಡ್, ಹರಿಯಾಣ ವತಿಯಿಂದ ಪ್ರಸ್ತಾಪಿಸಲಾದ ಮೇಲ್ಛಾವಣಿ ಸೌರಶಕ್ತಿ ಉತ್ಪಾದನಾ ಘಟಕದ ಸ್ಥಾಪನೆಯಲ್ಲಿ ಅಂತರ್ಗತ ವೆಚ್ಚ ಉಂಟಾಗುತ್ತಿದ್ದು, ಈ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆ ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಿಸಿದ ಹಿನ್ನೆಲೆಯಲ್ಲಿ, ಮಂಡಳಿಯು ಸದರಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಿತು.<br>**(ಕ್ರಮ : ಕುಲಸಚಿವರು / ಕಾರ್ಯನಿರ್ವಾಹಕ ಅಭಿಯಂತರರು)** |
| 3 | **ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಸಿಬ್ಬಂದಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳುವ ಕುರಿತು.**<br>**ಠರಾವು :**<br>ಮಂಡಳಿಯು ಸರ್ವಾನುಮತದಿಂದ ಕನಿಷ್ಠ ವೇತನ ನೀಡುವ ಷರತ್ತಿಗೊಳಪಟ್ಟು ಹಾಗೂ ಮಂಜೂರಾದ ಹುದ್ದೆಗಳಿಗನುಗುಣವಾಗಿ ಹೊರಗುತ್ತಿಗೆ ಆಧಾರದ ಮೇಲೆ ಸಹಾಯಕ ಸಿಬ್ಬಂದಿಯವರನ್ನು ನಿಯೋಜಿಸಿಕೊಳ್ಳುವ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು / ಕಾರ್ಯನಿರ್ವಾಹಕ ಅಭಿಯಂತರರು)** |
| 4 | **ರಾಯಚೂರು ಕೃಷಿ ವಿಶ್ವವಿದ್ಯಾಲಯದ ಪರವಾಗಿ ನಿಯೋಜಿಸಲಾಗುವ ವಕೀಲರುಗಳಿಗೆ ಫೀಸ್ ಅನ್ನು ನೀಡಲಾಗುತ್ತಿರುವುದಕ್ಕೆ ಅನುಮೋದನೆ ನೀಡುವ ಕುರಿತು.**<br>**ಠರಾವು :**<br>ವಿವಿಧ ರೀತಿಯ ಪ್ರಕಾರ್ಯಗಳಿಗೆ (ರಿಟ್ ಅರ್ಜಿ, ರಿಟ್ ಅಪೀಲು, ಇತ್ಯಾದಿ) ವಕೀಲರಿಗೆ ಹಾಲಿ ನೀಡಲಾಗುತ್ತಿರುವ ಫೀಸ್‌ಗಳ ಬಗ್ಗೆ ಮಾಹಿತಿಯನ್ನು ಪಡೆದು, ಮಂಡಳಿಯು ಪೂರ್ಣ ಮಾಹಿತಿಯೊಂದಿಗೆ ಪ್ರಸ್ತಾಪಿತ ಫೀಸುಗಳ ಮೊತ್ತಗಳೊಂದಿಗೆ ತುಲನಾತ್ಮಕವಾಗಿ ಚರ್ಚಿಸಲು ಅನುಕೂಲವಾಗುವ ಕಾರಣ, ಪ್ರಸ್ತಾಪಿತ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು ಮುಂದೂಡಿತು.<br>**(ಕ್ರಮ : ಕುಲಸಚಿವರು)** |

ಸಭಾಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 30-7-2018 | ಸಹಿ /- 30-7-2018 |
|---|---|
| **(ಗುತ್ತಿ ಜಂಬುನಾಥ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಗುತ್ತಿ ಜಂಬುನಾಥ)**<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಗುತ್ತಿ ಜಂಬುನಾಥ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

36